## ಮಿಕ್ಸ್/ಮಿಸ್ ಮ್ಯಾಚ್ ಎರಡಕ್ಕೂ ಸೈ

ಇಳಕಲ್ ಸೀರೆಗೆ ಯಾವುದೇ ಬ್ಲೌಸ್ ಅನ್ನು ಮಿಕ್ಸ್ ಅಂಡ್ ಮ್ಯಾಚ್ ಹಾಗೂ ಮಿಸ್ ಮ್ಯಾಚ್ ರೀತಿಯಲ್ಲಿ ಧರಿಸಬಹುದು. ಕ್ರಾಪ್ ಟಾಪ್, ಟೀ ಶರ್ಟ್, ಕಾಲರ್ ಶರ್ಟ್, ಸೀರೆಗೆ ವಿರುದ್ಧವಾದ ಬಣ್ಣದ ಉಡುಪನ್ನೂ ಹಾಕಿಕೊಳ್ಳಬಹುದು. ಟ್ಯಾಂಕ್ ಟಾಪ್, ಕ್ಯಾಮೊ ಟಾಪ್ ಹೀಗೆ ಯಾವುದೇ ರೀತಿಯ ಕಾಂಬಿನೇಷನ್ ಅನ್ನು ಧರಿಸಬಹುದು. ನಿರ್ದಿಷ್ಟ ಮ್ಯಾಚಿಂಗ್ ಬೇಕಾಗಿಲ್ಲ. ಮ್ಯಾಚಿಂಗ್ ಬೇಕು ಅನ್ನುವವರು ಸೀರೆಯ ದಡಿಗೆ (ಬಾರ್ಡರ್) ತಕ್ಕಂತ ಬಣ್ಣದ ರವಿಕೆಗಳನ್ನು ಧರಿಸಬಹುದು.

ಕೆಂಪು, ಹಸಿರು, ನೀಲಿ, ಹಳದಿ ಬಣ್ಣಗಳಲ್ಲಿ ಹಾಗೂ ದಪ್ಪ, ಕಡ್ಡಿ ಚೌಕುಳಿ ವಿನ್ಯಾಸದಲ್ಲಿ ಮಾತ್ರ ಜನಪ್ರಿಯವಾಗಿರುವ ಇಳಕಲ್ ಸೀರೆ ತನ್ನನ್ನು ಹೊಸ ವಿನ್ಯಾಸಕ್ಕೂ ತೆರೆದುಕೊಂಡಿದೆ. ತಿಳಿ ಬಣ್ಣಗಳಲ್ಲಿ ಅಂದರೆ, ತಿಳಿ ಗುಲಾಬಿ, ತಿಳಿ ಹಳದಿ, ತಿಳಿ ಹಸಿರು, ಬಿಳಿ, ಪಿಸ್ತಾ ಗ್ರೀನ್, ತಿಳಿ ನೀಲಿ, ಬೂದು ಬಣ್ಣಗಳಲ್ಲಿ ಯುವಜನರನ್ನು ಸೆಳೆಯುತ್ತಿದೆ.

ರೇಷ್ಮೆಯಿಂದ ತಯಾರಾಗುತ್ತದೆ. ಅದುವೇ ಈ ಸೀರೆಯ ವಿಶೇಷ. ನಾನಾ ವಿನ್ಯಾಸದ ಸೀರೆಯ ಅಂಚು ಹಾಗೂ ರೇಷ್ಮೆಯ ಸೆರಗು ಇಳಕಲ್ ಸೀರೆಯ ಅಂದವನ್ನು ದುಪ್ಪಟ್ಟು ಮಾಡುತ್ತದೆ. ಸೆರಗಿನ ತುದಿಯಲ್ಲಿ ಕೋಟೆ ರಕ್ಷಕ, ಟೋಪಿ ತೆನೆ, ಜೋಳದ ತೆನೆ, ರಂಪ, ಹಣಿಗೆ, ಗಿರಿಶ್ರೇಣಿ ವಿವಿಧ ರೀತಿಯ ಹಣಿಗೆಯ ವಿನ್ಯಾಸವಿರುತ್ತದೆ. ಕೆಂಪು ಮತ್ತು ಬಿಳಿ ಬಣ್ಣದ ರೇಷ್ಮೆ ದಾರಗಳಿಂದ ಸೆರಗು ಶ್ರೀಮಂತವಾಗಿ ಕಂಗೊಳಿಸುತ್ತದೆ.

ಕೆಂಪು, ಗಾಢ ಹಸಿರು, ತಿಳಿ ಹಸಿರು, ಬಿಳಿ, ಹಳದಿ, ನೀಲಿ, ಕಪ್ಪು... ಹೀಗೆ ದಟ್ಟ ಬಣ್ಣಗಳಲ್ಲಿ ಹೆಚ್ಚಾಗಿ ನೇಯಲ್ಪಡುವ ಇಳಕಲ್ ಸೀರೆ ಕಾಲಕ್ಕೆ ತಕ್ಕಂತೆ ತನ್ನ ಒಡಲ ಬಣ್ಣ ಹಾಗೂ ವಿನ್ಯಾಸದಲ್ಲಿ ಬದಲಾವಣೆ ಕಂಡಿದೆ. ವರ್ಲಿ, ಕಲಂಕಾರಿ, ಸ್ಕ್ರೀನ್ ಪ್ರಿಂಟಿಂಗ್ ಮೂಲಕ ವಿವಿಧ ವಿನ್ಯಾಸಗಳಲ್ಲೂ ಕಂಗೊಳಿಸುತ್ತಿರುವ ಇಳಕಲ್ ಸೀರೆ ತನ್ನ ಸೊಬಗು, ಅಂದದಿಂದ ಆಧುನಿಕ ಕಾಲದ ತರುಣಿಯರ ಮನಗಳಲ್ಲೂ ಸ್ಥಾನ ಭದ್ರಪಡಿಸಿಕೊಂಡಿದೆ.

ಉತ್ತರ ಕರ್ನಾಟಕದ ಶಾಲಾ–ಕಾಲೇಜುಗಳ ಎಥ್ನಿಕ್ ಡೇ ಸಮಾರಂಭಗಳಲ್ಲಿ ಇಳಕಲ್ ಸೀರೆಗಳದ್ದೇ ಕಾರುಬಾರು. ಕೈಮಗ್ಗ ಮತ್ತು ಪವರ್ ಲೂಮ್ ತಂತ್ರಗಳನ್ನು ಬಳಸಿಕೊಂಡು ನೇಯಲಾಗುವ ಇಳಕಲ್ ಸೀರೆಗಳು ಕಾಟನ್, ಸಿಲ್ಕ್ ಮತ್ತು ಕಾಟನ್–ಸಿಲ್ಕ್ ಮಿಶ್ರಣದಲ್ಲೂ ತಯಾರಾಗುತ್ತವೆ. ವಿನ್ಯಾಸ, ನೇಯ್ಗೆಯ ತಂತ್ರಗಾರಿಕೆ ಹಾಗೂ ಬಣ್ಣಗಳ ಕಾರಣಕ್ಕಾಗಿ ಇಳಕಲ್ ಸೀರೆಗಳಿಗೆ ಭೌಗೋಳಿಕ ಮಾನ್ಯತೆ (ಜಿಐ) ಟ್ಯಾಗ್ ಕೂಡಾ ದೊರೆತಿದೆ.

ಸಾಮಾನ್ಯವಾಗಿ 6 ರಿಂದ 9 ಗಜಗಳಷ್ಟು ಉದ್ದವಿರುವ ಇಳಕಲ್ ಸೀರೆ ಹೆಚ್ಚು ನೆರಿಗೆ ಬಯಸುವ ಹೆಂಗಳೆಯರಿಗೆ ಇಷ್ಟ. ಸೀರೆ ಉದ್ದವಾಯಿತು ಅನ್ನುವವರಿಗೆ ಅದರಲ್ಲೇ ಬ್ಲೌಸ್ ಕೂಡಾ ಹೊಲಿಸಿಕೊಳ್ಳುವ ಆಯ್ಕೆಯೂ ದೊರೆಯುತ್ತದೆ.

ಗೋಮಿ, ಚಿಕ್ಕಿ ಪಾರಸ್, ಗಾಯತ್ರಿ, ಗಾಡಿ ದಡಿ ಈ ರೀತಿಯ ನಾಲ್ಕು ಬಾರ್ಡರ್‌ಗಳು ಇಳಕಲ್ ಸೀರೆಯಲ್ಲಿವೆ. ರೇಷ್ಮೆಗೂ, ಕಾಟನ್‌ಗೂ ಕೊಂಡಿ ಹಾಕುವಂಥ ತಂತ್ರಗಾರಿಕೆಯೇ ಇಳಕಲ್ ಸೀರೆಯ ಮೆರುಗನ್ನು ಹೆಚ್ಚಿಸುತ್ತದೆ. ಕೈಮಗ್ಗದಲ್ಲಿ ಪ್ರತಿ ಇಳಕಲ್ ಸೀರೆಯನ್ನು ವಿಶಿಷ್ಟವಾಗಿ ನೇಯಲಾಗುತ್ತದೆ. ಪ್ರತಿ ಸೀರೆಗೂ ಬಣ್ಣ ಬದಲಿಸುವಂಥ ಆಯ್ಕೆ ಇಲ್ಲಿರುತ್ತದೆ. ಟೋಪಿ ತೆನೆ, ಗಾಯತ್ರಿ, ಲತಗುಣಿ (ಲತೂಡಿ), ಕೇದಿಗೆ ತೆನೆಯ ವಿನ್ಯಾಸ ರೇಷ್ಮೆ ಸೆರಗಿನ ಅಂದ ಹೆಚ್ಚಿಸುತ್ತದೆ ಎನ್ನುತ್ತಾರೆ ಗುಳೇದಗುಡ್ಡದ ನೇಕಾರ ರಮೇಶ.

ಏಳನೇ ಶತಮಾನದಿಂದ ತನ್ನ ಆರಂಭಿಕ ಹಂತವನ್ನು ಗುರುತಿಸಿಕೊಂಡಿರುವ ಇಳಕಲ್ ಸೀರೆ, ಚಾಲುಕ್ಯರ ಕಾಲದಲ್ಲಿ ಹಾಗೂ ಆನಂತರ ಬಂದ ರಾಜರ ಪ್ರೋತ್ಸಾಹದಿಂದ ತನ್ನ ಅಸ್ತಿತ್ವವನ್ನು ಉಳಿಸಿಕೊಂಡು ಬಂದಿದೆ. ಮುಖ್ಯವಾಗಿ ಉತ್ತರ ಕರ್ನಾಟಕದ ಬಹುತೇಕ ಭಾಗಗಳಲ್ಲಿ ಇಂದಿಗೂ ತನ್ನ ಖದರು ಉಳಿಸಿಕೊಂಡಿರುವ ಇಳಕಲ್ ಸೀರೆ, ಆನ್‌ಲೈನ್ ಮಾರುಕಟ್ಟೆಯ ದೆಸೆಯಿಂದಾಗಿ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡಿದೆ. ನಗರ ಕೇಂದ್ರಿತ ಮಹಿಳೆಯರೂ ತಮ್ಮ ಸಂಗ್ರಹದಲ್ಲೂ ಒಂದು ಇಳಕಲ್ ಸೀರೆ ಇರಲಿ ಎಂದು ಖರೀದಿಸುವಷ್ಟು



ಇಳಕಲ್ ಸೀರೆಯಲ್ಲಿ ವಸ್ತ್ರ ವಿನ್ಯಾಸಕಿ ವೃಂದಾ ಶೇಖರ್

ಮೋಹ ಉಳಿಸಿಕೊಂಡಿರುವ ಇಳಕಲ್ ಸೀರೆ, ಆನ್‌ಲೈನ್ ಮಾರುಕಟ್ಟೆಯಲ್ಲಿ ಹೆಂಗಳೆಯರ ಮನ ಸೆಳೆಯುತ್ತಿದೆ.

ತನ್ನ ಭೌಗೋಳಿಕತೆಯ ಕಾರಣಕ್ಕಾಗಿ ಉತ್ತರ ಕರ್ನಾಟಕದಲ್ಲಿ ಜನಪ್ರಿಯವಾಗಿದ್ದ ಇಳಕಲ್ ಸೀರೆಗಳು ಈಗ ಭೌಗೋಳಿಕ ವ್ಯಾಪ್ತಿಯನ್ನೂ ಮೀರಿದೆ. ಹಳ್ಳಿ–ಪಟ್ಟಣಗಳ ಸಾಮಾನ್ಯ ಗೃಹಿಣಿಯರು, ಕಾಲೇಜು ತರುಣಿಯರಿಂದ ಹಿಡಿದು, ಕಾರ್ಪೊರೇಟ್ ಮಹಿಳಾ ಉದ್ಯೋಗಿಗಳು, ಸೆಲೆಬ್ರಿಟಿಗಳ ವಾರ್ಡ್‌ರೋಬ್‌ನಲ್ಲೂ ಈ ಸೀರೆ ಸ್ಥಾನ ಪಡೆದಿದೆ. ಮಹಿಳಾ ಅಧಿಕಾರಿಗಳು, ಸೆಲೆಬ್ರಿಟಿ ಮಹಿಳೆಯರು ಈ ಸೀರೆಗಳನ್ನು ಸಣ್ಣಪುಟ್ಟ ಸಮಾರಂಭಗಳು, ಸಭೆಗಳಿಗೂ ಧರಿಸುವ ವಾಡಿಕೆ ಹೆಚ್ಚುತ್ತಿದೆ.

### ಹೊಸ ಪ್ರಯೋಗ

ಇಳಕಲ್ ಸೀರೆಯ ಒರಿಜಿನಲ್ ಲುಕ್ ಬದಲಾಯಿಸಲಾಗದು. ಕೆಂಪು ಟೋಪ್ ತೆನಿ (Tope teni) ಇದ್ದರೇನೆ ಅದು ಇಳಕಲ್ ಸೀರೆ ಅನಿಸಿಕೊಳ್ಳುತ್ತದೆ. ಹಳೆಯ ವಿನ್ಯಾಸ ಉಳಿಸಿಕೊಂಡೇ ಸೀರೆಯ ಬೇರೆ ಬೇರೆ ಭಾಗಗಳಲ್ಲಿ ಸ್ಥಾನ ಪಲ್ಲಟಗೊಳಿಸಿದ್ದೇನೆ. ಇಳಕಲ್ ಸೀರೆ ಮೇಲೆ ಹಂಪಿ ರಥದ ಸ್ಕ್ರೀನ್ ಪ್ರಿಂಟ್ ಮಾಡಿಸಿ ಪ್ರಯೋಗ ಮಾಡಿದ್ದೇನೆ. ಕಸೂತಿ, ಲಂಬಾಣಿ ಕಸೂತಿಯನ್ನೂ ಇಳಕಲ್ ಸೀರೆಯಲ್ಲಿ ಅಳವಡಿಸಿಕೊಳ್ಳಬಹುದು. ಸೀರೆ ಸ್ಕರ್ಟ್ ಆಗಿ, ಮಕ್ಕಳ ಲಂಗ–ಜಂಪರ್, ಗಂಡಸರ ಧೋತಿ ಆಗಿ ರೂಪಾಂತರವೂ ಆಗುತ್ತಿದೆ ಎನ್ನುತ್ತಾರೆ ಇಳಕಲ್ ಸೀರೆಯಲ್ಲಿ ಪ್ರಯೋಗಶೀಲರಾಗಿರುವ ವಸ್ತ್ರವಿನ್ಯಾಸಕಿ ವೃಂದಾ ಶೇಖರ್.

‘ಮಹಾರಾಷ್ಟ್ರದ ದಕ್ಷಿಣ ಭಾಗಗಳಲ್ಲಿ ಪುಣೇರಿ ಸೀರೆ, ಸೋಲಾಪುರಿ, ನಾರಾಯಣಪೇಟೆ, ವೆಂಕಟಗಿರಿ ಸೀರೆಗಳ ವಿನ್ಯಾಸಗಳು ಇಳಕಲ್ ಸೀರೆಯಿಂದ ಪ್ರೇರಣೆ ಪಡೆದು ಈಗಲೂ ಚಾಲ್ತಿಯಲ್ಲಿವೆ. ಲ್ಯಾಕ್ಮೆ ಫ್ಯಾಷನ್ ವೀಕ್‌ನಲ್ಲೂ ಈ ಸೀರೆ ತನ್ನ ಹೆಜ್ಜೆಯ ಗುರುತು ಮೂಡಿಸಿದೆ. ಆದರೂ, ಈ ಸೀರೆ ಯುವಜನರನ್ನು ಮತ್ತಷ್ಟು ಸೆಳೆಯುವ ಅಗತ್ಯವಿದೆ. ಎಲ್ಲರೂ ಗಾಢಬಣ್ಣವನ್ನೇ ಬಳಸುತ್ತಾರೆ ಎಂದು ಹೇಳಲಾಗದು. ಹಾಗಾಗಿ, ಇಳಕಲ್ ಸೀರೆಗಳಲ್ಲಿ ತಿಳಿ ಬಣ್ಣಗಳ ಬಳಕೆಯೂ ಆಗುತ್ತಿದೆ ಅನ್ನುವುದು ಅವರ ಮಾತು.